# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 388(354) |
| ಉತ್ತರಿಸಬೇಕಾದ ದಿನಾಂಕ | : | 19.08.2026 |
| ಸದಸ್ಯರ ಹೆಸರು | : | ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸುಳ್ಳು ಮತ್ತು ನಕಲಿ ದಾಖಲೆಗಳನ್ನು ನೀಡಿ ಕಾನೂನುಬಾಹಿರವಾಗಿ ಪಿಂಚಣಿ ಪಡೆಯುತ್ತಿದ್ದ 91,152 ಅನರ್ಹ ಫಲಾನುಭವಿಗಳ ಪಿಂಚಣಿಯನ್ನು ತಕ್ಷಣದಿಂದಲೇ ಖಾಯಂ ಆಗಿ ರದ್ದುಗೊಳಿಸಿರುವುದು ನಿಜವೇ; ಹೌದಾದಲ್ಲಿ, ಈ ಅನರ್ಹರಿಂದ ಈವರೆಗೆ ದುರುಪಯೋಗಪಡಿಸಿಕೊಂಡಿರುವ ಪಿಂಚಣಿ ಹಣವನ್ನು ಮರುಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶದಿಂದ ಪಡೆದ ಮಾಹಿತಿಗಳನ್ನು ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಮಾಹಿತಿಗಳೊಂದಿಗೆ ಸಂಯೋಜಿಸಿದಾಗ 23,14,544 ಫಲಾನುಭವಿಗಳು ಸಂದೇಹಾಸ್ಪದ ಫಲಾನುಭವಿಗಳಾಗಿ ಕಂಡು ಬಂದಿರುತ್ತಾರೆ.<br>ಈ ಫಲಾನುಭವಿಗಳ ಭೌತಿಕ ಪರಿಶೀಲನೆಗಾಗಿ ಸಂಯೋಜನ ಮೊಬೈಲ್ ಆಪ್ ಸಿದ್ಧಪಡಿಸಿ ಪರಿಶೀಲನೆ ನಡೆಸಲಾಗಿದೆ.<br>ಪರಿಶೀಲನೆ ಸಮಯದಲ್ಲಿ<br>• ದಾಖಲಾತಿಗಳನ್ನು ಹಾಜರುಪಡಿಸದ<br>• ನೀಡಿದ ವಿಳಾಸದಲ್ಲಿ ವಾಸವಿಲ್ಲದಿದ್ದ<br>• ಆದಾಯ ದೃಢೀಕರಣ ಪತ್ರ ಹಾಜರು ಪಡಿಸದಿದ್ದ<br>ಒಟ್ಟು 18,06,032 ಸಂದೇಹಾಸ್ಪದ ಫಲಾನುಭವಿಗಳ ಪಿಂಚಣಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.<br>• ಗ್ರಾಮ ಆಡಳಿತ ಅಧಿಕಾರಿಗಳು ಪರಿಶೀಲಿಸಿದ ನಂತರ ತಹಸೀಲ್ದಾರರು ಪರಿಶೀಲಿಸಿ ರದ್ದುಪಡಿಸಿದ ಸಂದೇಹಾಸ್ಪದ ಫಲಾನುಭವಿಗಳ ಸಂಖ್ಯೆ 51,789 |
| (ಆ) | ರಾಜ್ಯಾದ್ಯಂತ ಪ್ರಸ್ತುತ ಒಟ್ಟು 83,11,493 ಫಲಾನುಭವಿಗಳು ಪಿಂಚಣಿ ಪಡೆಯುತ್ತಿದ್ದು, ಇವರ ಪೈಕಿ ಪ್ರಾಥಮಿಕ ತಪಾಸಣೆಯಲ್ಲಿ 23,13,664 ಫಲಾನುಭವಿಗಳ ವಿವರಗಳು ಶಂಕಾಸ್ಪದ ಮತ್ತು ಸಂದೇಹಾಸ್ಪದ ಎಂದು ಕಂಡು ಬಂದಿರುವುದಕ್ಕೆ ಪ್ರಮುಖ ಕಾರಣಗಳೇನು; ಈ ದಾಖಲೆಗಳ ಸಂಪೂರ್ಣ ಪರಿಶೀಲನೆಗೆ ಸರ್ಕಾರ ಹಾಕಿಕೊಂಡಿರುವ ಕಾಲಮಿತಿ ಏನು; | ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶದಿಂದ ಪಡೆದ ಮಾಹಿತಿಗಳನ್ನು ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳಡಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಮಾಹಿತಿಗಳೊಂದಿಗೆ ಸಂಯೋಜಿಸಿದಾಗ 23,14,544 ಫಲಾನುಭವಿಗಳು ಸಂದೇಹಾಸ್ಪದ ಫಲಾನುಭವಿಗಳಾಗಿ ಕಂಡು ಬಂದಿರುತ್ತಾರೆ.<br>• ಅರ್ಹತೆಗಿಂತ ಕಡಿಮೆ ವಯಸ್ಸಿನಲ್ಲಿ ಪಿಂಚಣಿ ಮಂಜೂರಾತಿ ಪಡೆದವರು,<br>• ಆದಾಯಮಿತಿ ಹೆಚ್ಚಿನವರು,<br>• ಹೆಚ್.ಆರ್.ಎಂ.ಎಸ್ ನಲ್ಲಿ ಇರುವವರು,<br>• ಆದಾಯ ತೆರಿಗೆ ಪಾವತಿದಾರರು,<br>• ಎ.ಪಿ.ಎಲ್ ಕಾರ್ಡ್ ಹೊಂದಿರುವವರು,<br>• ಸರ್ಕಾರವು ನಿಗದಿಪಡಿಸಿರುವ ಪ್ರಮಾಣಕ್ಕಿಂತ ಕಡಿಮೆ ಅಂಗವಿಕಲತೆ ಹೊಂದಿರುವಂತಹವರನ್ನು ಸಂದೇಹಾಸ್ಪದ ಫಲಾನುಭವಿಗಳು ಎಂದು ಗುರುತಿಸಲಾಗಿದೆ. |

<table>
<tr><td></td><td></td><td>ಸಂಯೋಜನೆ ಮೊಬೈಲ್ ಆಪ್ ತಂತ್ರಾಂಶ ಅಭಿವೃದ್ಧಿಪಡಿಸಿ ಸಂದೇಹಾಸ್ಪದ ಫಲಾನುಭವಿಗಳ ಭೌತಿಕ ಪರಿಶೀಲನೆ ನಡೆಸಿ ಅರ್ಹರ ಪಿಂಚಣಿಗಳನ್ನು ಮುಂದುವರೆಸಲು ತಾಂತ್ರಿಕ ವಿಧಾನ ಮತ್ತು ಪರಿಶೀಲನಾ ಪ್ರಕ್ರಿಯೆ ಕೈಗೊಂಡಿದ್ದು, ಪರಿಶೀಲನಾ ಕಾರ್ಯವು ಮುಕ್ತಾಯ ಹಂತದಲ್ಲಿದೆ.</td></tr>
<tr><td>(ಇ)</td><td>ಪ್ರಸ್ತುತ 16,42,303 ಫಲಾನುಭವಿಗಳ ಪಿಂಚಣಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವುದು ನಿಜವೇ; ಇಷ್ಟೊಂದು ಬೃಹತ್ ಸಂಖ್ಯೆಯ ಫಲಾನುಭವಿಗಳ ಪಿಂಚಣಿ ನಿಲ್ಲಿಸಿರುವುದರಿಂದ ಅರ್ಹ ಬಡವರು, ವೃದ್ಧರು ಹಾಗೂ ವಿಕಲಚೇತನರಿಗೆ ತೊಂದರೆಯಾಗದಂತೆ ತಡೆಯಲು ಸರ್ಕಾರ ಕೈಗೊಂಡಿರುವ ಪರ್ಯಾಯ ಮುಂಜಾಗ್ರತಾ ಕ್ರಮಗಳೇನು;</td><td rowspan="2">ಭೌತಿಕ ಪರಿಶೀಲನೆ ಸಮಯದಲ್ಲಿ ದಾಖಲಾತಿಗಳನ್ನು ಹಾಜರುಪಡಿಸದ, ನೀಡಿದ ವಿಳಾಸದಲ್ಲಿ ವಾಸವಿಲ್ಲದಿದ್ದ ಮತ್ತು ಆದಾಯ ದೃಢೀಕರಣ ಪತ್ರ ಹಾಜರುಪಡಿಸದಿದ್ದ ಒಟ್ಟು 18,06,032 ಸಂದೇಹಾಸ್ಪದ ಫಲಾನುಭವಿಗಳ ಪಿಂಚಣಿಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಇಂತಹ ಸಂದೇಹಾಸ್ಪದ ಫಲಾನುಭವಿಗಳಿಗೆ –<br><br>• Directorate of Electronic Delivery of Citizen Services (EDCS) ಮೂಲಕ ದಿನಾಂಕ:14.07.2026 ರಂದು ಅಗತ್ಯ ದಾಖಲೆಗಳನ್ನು ತಾಲ್ಲೂಕು ಕಚೇರಿಗೆ ಸಲ್ಲಿಸಲು SMS ಸಂದೇಶ ಕಳುಹಿಸಲಾಗಿದೆ.<br><br>• ರಾಜ್ಯದ ಎಲ್ಲಾ ತಾಲ್ಲೂಕುಗಳ ತಹಸೀಲ್ದಾರರ ಮೂಲಕ ತಿಳಿವಳಿಕೆಯನ್ನು ಜಾರಿ ಮಾಡಿ 30 ದಿನಗಳೊಳಗೆ ದಾಖಲಾತಿಯನ್ನು ಸಂಬಂಧಿತ ತಾಲ್ಲೂಕು ಕಚೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಫಲಾನುಭವಿಗಳಿಂದ ಸ್ವೀಕೃತವಾದ ದಾಖಲೆಗಳನ್ನು ಪರಿಶೀಲಿಸಿ ಅರ್ಹತಾ ಮಾನದಂಡಗಳನ್ವಯ ಪಿಂಚಣಿ ಮುಂದುವರೆಸಲು ಕ್ರಮವಹಿಸಲಾಗುವುದು.</td></tr>
<tr><td>(ಈ)</td><td>ಇಷ್ಟು ದೊಡ್ಡ ಮಟ್ಟದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಪಿಂಚಣಿ ದಂಧೆ ನಡೆಸಲು ಕಾರಣರಾದ ಅಧಿಕಾರಿಗಳು ಅಥವಾ ಮಧ್ಯವರ್ತಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಶಿಸ್ತುಕ್ರಮ ಅಥವಾ ಕಾನೂನು ಕ್ರಮಗಳ ವಿವರಗಳೇನು?</td></tr>
</table>

**ಕಡತ ಸಂಖ್ಯೆ:ಆರ್‌ಡಿ 228 ಕೆಎಟಿ ಎಸ್‌ಎಸ್‌ಪಿ 2026**

(ಡಾ|| ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ